ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯಮಂತ್ರಿಗಳು ವೀರಪ್ಪನ್ ಬಗ್ಗೆ ಹೇಳಿಕೆ ಕೊಟ್ಟರಂತೆ....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಕರ್ನಾಟಕ ರಾಜ್ಯದಲ್ಲಿ 180 ಜನರ ಮರಣ ಹೋಮ ನಡೆದಿದೆ. 180 ಜನ ಮಹಿಳೆಯರು ವಿಧವೆಯರಾಗಿದ್ದಾರೆ ಒಳ್ಳೆ ಒಳ್ಳೆಯವರೇ ಆದು ನಮ್ಮ ಹಣೆ ಬರಹ. ನನಗೇನೂ ಅವರ ಬಗ್ಗೆ ವೈಯಕ್ತಿಕವಾಗಿ ದ್ವೇಷ ಇಲ್ಲ. ಒಳ್ಳೆಯ ಅಭಿಪ್ರಾಯವೇ ಇದೆ. ಆದರೆ ಸರ್ಕಾರ ತಗೆದುಕೊಂಡ ನಿರ್ಧಾರ ಅಪಾಯಕಾರಿ ಬೆಳವಣಿಗೆ. ಸರಿಯಾಗಿಯೇ ಇದೆ ಎಂದು ಹೇಳುವವರು ಇಂಥವರು. ಎಂಥವರು ಎಂದರೆ ಒಂದೊಂದು ಚುಟಕಾ-ಚುಟಕಾ ಆಸೆ ಪಡುತ್ತಾರಲ್ಲಾ ಇಂಥವರು. ನನ್ನಂಥವರಲ್ಲ. ಆದು ನನಗೆ ಗೊತ್ತಿದೆ "ಹೆತ್ತವಳಿಗೆ ಗೊತ್ತು ಹೆರಿಗೆಯ ನೋವು" ಈ ಬಂಜೆಗೆ ಏನು ಗೊತ್ತು? ಇದು ಬಂಜೆ ಇದಕ್ಕೆ ಏನು ಗೊತ್ತು ನೋವು, ನನ್ನ ಜಿಲ್ಲೆ, ನನ್ನ ತಾಲ್ಲೂಕಿನಲ್ಲಿ ನಡೆದಿರತಕ್ಕಂತಹ ಹೋರಾಟ, ರಕ್ತಪಾತ, ಆನೆಗಳ ದಂತಗಳ ಚೋರತನ. ಆ ಅನ್ಯಾಯ ಯಾರೂ ಸಹಿಸಲು ಸಾಧ್ಯವಿಲ್ಲ.

**ನರಹಂತಕ ವೀರಪ್ಪನ್ ಬಗ್ಗೆ ಶ್ರೀ ವಾಟಾಳ್ ನಾಗರಾಜ್‌ರವರಿಂದ ಪ್ರಸ್ತಾಪ ಹಾಗು ಧರಣಿ**

ಈ ನೋವು ಸತ್ತವರಿಗೆ ಗೊತ್ತು. ಸಾಯದೆ ಇರುವವರೆಗೆ ಏನು ಗೊತ್ತು ನೋವು? ನಾನು ಅವರನ್ನು ವೈಯಕ್ತಿಕವಾಗಿ ದೋಷಣೆ ಮಾಡುತ್ತಾ ಇಲ್ಲ. ಸರ್ಕಾರದ ನಿರ್ಧಾರ ಅಪಾಯಕಾರಿ ಬೆಳವಣಿಗೆ, ಈ ಅಪಾಯಕಾರಿ ಬೆಳವಣಿಗೆಯನ್ನು ನಾನು ವಿರೋಧಿಸುತ್ತೇನೆ, ವಿರೋಧಿಸಿ ಧರಣಿ ಮಾಡುತ್ತೇನೆ. ನನಗೆ ಗೊತ್ತಿದೆ ಜಿಗಜಣಗಿಯವರೇ, ಏನು ನಗುತ್ತಾ ಇದ್ದಿರಿ ನಾಚಿಕೆಯಾಗಬೇಕು 20 ವರ್ಷದ ರಾಜಕೀಯದಲ್ಲಿ ನಿರಂತರವಾಗಿ ಮುಂದುವರೆದಿರತಕ್ಕ ಅನ್ಯಾಯ ನೋಡಿ. ನೀವು ಎಲ್ಲರೂ ರಾಜೀನಾಮೆಯನ್ನು ಕೊಡಬೇಕು.

(ಗೊಂದಲ)

(xxx) ನನ್ನ ಮೆಂಬರ್‌ಶಿಫ್ ಕಿತ್ತು ಹಾಕಿದರೆ ಹಾಕಿ. ಇದರಲ್ಲಿ ನನಗೆ ಎಷ್ಟು ನೋವು ಆಗಿದೆ ನನಗೆ ಗೊತ್ತು.

(ಶ್ರೀ ವಾಟಾಳ್ ನಾಗರಾಜ್ ಅವರು ಸರ್ಕಾರದ ನಿರ್ಧಾರವನ್ನು ಪ್ರತಿಭಟಿಸಿ
ಸದನದ ಬಾವಿಯಲ್ಲಿ ಧರಣಿ ಕುಳಿತರು )

ಶ್ರೀ ಎಸ್. ಕೃಷ್ಣಪ್ಪ : ಈ ರೀತಿ ಏನು ಮಾಡುತ್ತೀರಿ ಮಾಡಿ ಎಂದು ಹೇಳಿ ಹೋಗುವುದು ಸರಿಯೇ ಇದು ಸಭೆನಾ. ದಬ್ಬಾಳಿಕೆ ಹಾಗೆ ಮಾತನಾಡಿದರೆ ಹೇಗೆ?

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಮೊದಲನೆಯದಾಗಿ, ಅವರು ಅಧ್ಯಕ್ಷರ ಅಥಾರಟಿಯನ್ನು ಚಾಲೆಂಜ್ ಮಾಡಿರುವುದು ಕಡತದಿಂದ ಹೋಗಬೇಕು. ಯಾರೇ ಆಗಲೀ ಏನು ಮಾಡುತ್ತೀರಿ ಮಾಡಿ ಎಂದು ಹೇಳಲಿಕ್ಕೆ ಬರುವುದಿಲ್ಲ. ಹಾಗೆ ಹೇಳಕೂಡದು. ನಾನು ಬಹಳ ವರ್ಷಗಳಿಂದ ಈ ಸದನದಲ್ಲಿ ಇದ್ದೇನೆ. ಅದು ಕಡತದಿಂದ ಹೋಗಬೇಕು. ಇನ್ನು ನಾನು ಹೇಳಿಕೆ ಕೊಟ್ಟು ಅದರ ಮೇಲೆ ಚರ್ಚೆಯಾಗಿದೆ. ವಿರೋಧ ಪಕ್ಷದ ಎಲ್ಲರೂ ವಾಕ್ ಔಟ್ ಮಾಡಿದ್ದಾರೆ. ವೀರಪ್ಪನ್ ಶರಣಾಗತಿಯ ವಿಷಯದಲ್ಲಿ ಇವತ್ತು ಅವನ ಹತ್ತಿರ ಇರುವ ಎಂಟು ಜನರ ಪ್ರಾಣವನ್ನು ಉಳಿಸುವುದಕ್ಕೋಸ್ಕರ ನಾವು ಪ್ರಯತ್ನ ಮಾಡುತ್ತಿದ್ದೇವೆಂದು ಸದನಕ್ಕೆ ನಾನು ಮನದಟ್ಟು ಮಾಡಿದ್ದೇನೆ. ಅದು ಸರಿಯಿಲ್ಲ ಎಂದು ವಾಕ್ ಔಟ್ ಮಾಡಿದ್ದರೆ ನನ್ನದೇನೂ ಅಭ್ಯಂತರ ಇಲ್ಲ. ವೀರಪ್ಪನ್ ಬಗ್ಗೆ ಚರ್ಚೆಯಾಗಿ ಎಲ್ಲಾ ಮುಗಿದಿದೆ. ಈಗ ಕಂದಾಯ ಇಲಾಖೆಯ ಡಿಮ್ಯಾಂಡ್ ಮೇಲೆ ಮಾನ್ಯ ಚಿಮ್ಮಣಕಟ್ಟಿಯವರು ಭಾಷಣ ಮಾಡುತ್ತಿದ್ದಾರೆ. ಇವರು ಇಷ್ಟೊಂದು ಅನುಭವಿ ಶಾಸಕರು ಯಾವುದೇ ವಿಷಯವನ್ನು, ಯಾವಾಗಲಾದರೂ ಮಾತನಾಡಿದರೆ ನಡೆಯುತ್ತದೆಯೇ. ಈಗ ಕಂದಾಯ ಇಲಾಖೆ ಮೇಲೆ ಚರ್ಚೆ ನಡೆದಿದೆ. ಇದು ಆದಮೇಲೆ ಅವರು ಹೋಮ್ ಡಿಪಾರ್ಟ್‌ಮೆಂಟ್ ಮೇಲೆ There are so many avenues. ಅವರು ಚರ್ಚೆ ಮಾಡಲಿ ಸಲಹೆಯನ್ನು ಕೊಡಲಿ. ಅವರು ಅದೇ ಏರಿಯಾದವರು ಇರಬಹುದು, ಅವರಿಗೆ ನೋವು ಆಗಿರಬಹುದು. ಆದರೆ ಮಾತನಾಡಲು ಸಂದರ್ಭ ಬೇಡವೇ? ಇದು ಸರಿಯಲ್ಲ.

ಉಪಾಧ್ಯಕ್ಷರು : ನೀವು ಎಲ್ಲಾ ಮಾಡುವುದನ್ನು ಮಾಡಿ ಕ್ಷಮಾಪಣೆ ಕೇಳಿದರೆ ಏನು ಅರ್ಥ, ಅದು ಎಲ್ಲಾ ಆಗುವುದಿಲ್ಲ. ನೀವು ಹಿರಿಯ ಸದಸ್ಯರು 5 ಸಾರಿ ಆರಿಸಿ ಬಂದಿದ್ದೀರಿ, ಇದು ಸರಿಯಾಗುವುದಿಲ್ಲ. ದಯಮಾಡಿ ನಿಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಳ್ಳಿ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಟ್ಟಿದ್ದಾರೆ. ಕಾಂಗ್ರೆಸ್‌ನ ನಾಯಕರು ಸಭಾತ್ಯಾಗ ಮಾಡಿದ್ದರು, ಬಿಜೆಪಿಯವರು ಸಭಾತ್ಯಾಗ ಮಾಡಿದ್ದರು. ಆಗ ಶ್ರೀರಾಮರೆಡ್ಡಿಯವರು ಒಂದು ಮಾತನ್ನು ಹೇಳಿದರು, ಇಲ್ಲಿ 8 ಜನರ ಸಾವಿನ ಪರಿಸ್ಥಿತಿ ಇರುವುದರಿಂದ ಇಲ್ಲಿ ಅದನ್ನು ಚರ್ಚೆ ಮಾಡುವುದು ಬೇಡ ಎಂದು ಹೇಳಿದ್ದರು. ಅದಕ್ಕೆ ಪುಟ್ಟಣ್ಣಯ್ಯನವರು ಬೆಂಬಲಕೊಟ್ಟರು. ಆ ಮೇಲೆ ಚರ್ಚೆ ಮುಕ್ತಾಯವಾಗಿ. ಈಗ ಕಂದಾಯ ಇಲಾಖೆಯ ಡಿಮಾಂಡ್ ಮೇಲೆ ಸನ್ಮಾನ್ಯ ಚಿಮ್ಮಣಕಟ್ಟಿಯವರು ಮಾತನಾಡುತ್ತಿದ್ದಾರೆ, ಅವರು ಅನೇಕ ವಿಷಯಗಳ ಮೇಲೆ ಬೆಳಕನ್ನು ಚೆಲ್ಲುತ್ತಿದ್ದಾರೆ. ಅವರು ಮಾತನಾಡುವುದು ಮುಗಿದ ಮೇಲೆ ತಾವು ಏನಾದರೂ ಹೇಳುವುದು ಇದ್ದರೆ ಹೇಳಿ. ತಮ್ಮ ಸ್ಥಾನಕ್ಕೆ ಹೋಗಬೇಕೆಂದು ಪದೇ ಪದೇ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ದಯಮಾಡಿ ನಿಮ್ಮ ಸ್ಥಾನಕ್ಕೆ ಹೋಗಿ.

ಶ್ರೀ ವಾಟಾಳ್ ನಾಗರಾಜ್ : ಧರಣಿ ಮಾಡಿದ ತಕ್ಷಣ ಸಭೆ ನಡೆಯಬಾರದು ಎಂದು ಏನೂ ಇಲ್ಲ. ನಾನು ಧರಣಿ ಮಾಡುತ್ತೇನೆ ಅವರು ಭಾಷಣ ಮಾಡಲಿ.

---

( xxx ಉಪಾಧ್ಯಕ್ಷರ ಆಪ್ಪಣೆ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ)